**ಕಾಲೇಜು ಶಿಕ್ಷಣ ಇಲಾಖೆ**
**ಕರ್ನಾಟಕ ಸರ್ಕಾರ**
**Department of Collegiate Education**
Government of Karnataka

NO. 1, 2nd Floor, DTE Building, Palace Road, Bangalore - 560 001; Phone: 080 2226 3327, Fax: 080 2228 3758, email: bngcce@kar.nic.in

ಸಂಖ್ಯೆ: ಕಾಶಿಇ/ಶೈವಿ/13/ಜಂಟಿ ಖಾತೆ/2016-17

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ**
ಬೆಂಗಳೂರು, ದಿನಾಂಕ: 26.06.2018

**ನೆನಪೋಲೆ**

**ಇವರಿಗೆ,**

1. ಕಾಲೇಜು ಶಿಕ್ಷಣ ಇಲಾಖೆಯಡಿ ಬರುವ
   ಎಲ್ಲಾ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರು
2. ಇಲಾಖಾ ವ್ಯಾಪ್ತಿಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು

ಮಾನ್ಯರೆ,

ವಿಷಯ: ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ 2015-16 ರಿಂದ 2017-18ನೇ ಸಾಲಿನವರೆಗೆ ವಿದ್ಯಾರ್ಥಿಗಳಿಂದ ದುಪ್ಪಟ್ಟು ದರದಲ್ಲಿ ಸಂಗ್ರಹಿಸಿರುವ ಬೋಧನಾ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಜಂಟಿ ಖಾತೆಗೆ ಜಮಾ ಮಾಡಿರುವ ಮಾಹಿತಿ ಒದಗಿಸುವ ಕುರಿತು.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆ: ಇಡಿ 139 ಯುಪಿಸಿ 2014 ಬೆಂಗಳೂರು ದಿನಾಂಕ: 18.10.2014.
2.ಸಮಸಂಖ್ಯೆಯ ಪತ್ರದ ದಿನಾಂಕ:29.5.2018

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರಿ ಆದೇಶದ ಪ್ರಕಾರ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಅನುದಾನಿತ ಕೋರ್ಸು/ವಿಷಯಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಂದ 2015-16 ರಿಂದ 2017-18ನೇ ಸಾಲುಗಳಲ್ಲಿ ದುಪ್ಪಟ್ಟು ದರದಲ್ಲಿ ಸಂಗ್ರಹಿಸಲಾಗಿರುವ ನಿಗದಿತ ಬೋಧನಾ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಜಂಟಿ ಖಾತೆಗೆ ಜಮಾ ಮಾಡಿರುವ ವಾರ್ಷಿಕವಾರು ಕ್ರೋಢೀಕೃತ ಮಾಹಿತಿಯನ್ನು ಕಾಲೇಜು ಶಿಕ್ಷಣ ಇಲಾಖೆಯ ವೆಬ್‌ಸೈಟ್ www.dce.kar.nic.in ನಲ್ಲಿ ಲಭ್ಯವಿರುವ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಿ ಹಾಗೂ ನಿಗಧಿತ ನಮೂನೆಯಲ್ಲಿ ಸದರಿ ಮಾಹಿತಿಯನ್ನು ಸಿದ್ಧಪಡಿಸಿ ದೃಢೀಕೃತ ಪ್ರತಿಯನ್ನು ದಿನಾಂಕ: 15-06-2018 ರೊಳಗಾಗಿ ಈ ಕಛೇರಿಗೆ ಸಲ್ಲಿಸಲು ಉಲ್ಲೇಖ-2ರ ಈ ಕಛೇರಿ ಪತ್ರದಲ್ಲಿ ತಿಳಿಸಿ, ಮಾಹಿತಿಯನ್ನು ನಿಗಧಿತ ದಿನಾಂಕದೊಳಗೆ ಸಲ್ಲಿಸದಿದ್ದಲ್ಲಿ 2018ರ ಜುಲೈ ಮಾಹೆಯ ವೇತನಾನುದಾನವನ್ನು ತಡೆಹಿಡಿಯಲಾಗುವುದು ಎಂದು ಸ್ಪಷ್ಟವಾಗಿ ಸೂಚಿಸಲಾಗಿತ್ತು. ಆದರೂ ಸುಮಾರು 185 ಕಾಲೇಜುಗಳ ಮಾಹಿತಿ ಅಪ್‌ಲೋಡ್ ಆಗಿರುವುದಿಲ್ಲ ಹಾಗೂ ನಿಗಧಿತ ನಮೂನೆಗಳೂ ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

**ಕಾಲೇಜುಗಳಿಂದ ವಿವರಗಳು ಬಾರದಿರುವುದರಿಂದ ಸರ್ಕಾರಕ್ಕೆ ಮಾಹಿತಿ ಸಲ್ಲಿಸಲು ವಿಳಂಬವಾಗುತ್ತಿದೆ. ಆದುದರಿಂದ ಅಗತ್ಯ ಮಾಹಿತಿಯನ್ನು ಕಡ್ಡಾಯವಾಗಿ ದಿನಾಂಕ: 28.6.2018ರೊಳಗಾಗಿ ವೆಬ್‌ಸೈಟ್ www.dce.kar.nic.in ನಲ್ಲಿ ಅಪ್‌ಲೋಡ್ ಮಾಡಿ, ದೃಢೀಕೃತ ಪ್ರತಿಯನ್ನು ಈ ಕಚೇರಿಗೆ ಸಲ್ಲಿಸುವಂತೆ ಮತ್ತೊಮ್ಮೆ ಸೂಚಿಸಲಾಗಿದೆ. ಈ ವಿಷಯವನ್ನು ಅತ್ಯಂತ ತುರ್ತು ಎಂದು ಭಾವಿಸತಕ್ಕದ್ದು. ಅಂತಿಮ ದಿನಾಂಕದೊಳಗೆ ಮಾಹಿತಿ ಸಲ್ಲಿಸದ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ವೇತನಾನುದಾನಗಳನ್ನು ತಡೆಹಿಡಿಯುವ ಬಗ್ಗೆ ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರು ಸೂಕ್ತ ಕ್ರಮ ಕೈಗೊಂಡು ಈ ಕಚೇರಿಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿದೆ.**

ತಮ್ಮ ವಿಶ್ವಾಸಿ,

ಕಾಲೇಜು ಶಿಕ್ಷಣ ಆಯುಕ್ತರು